# ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ -591156

(ನ್ಯಾಕ್‌ಮಾನ್ಯತೆ ಬಿ+ ಗ್ರೇಡ್-2021) ಪಿಎಂ-ಉಷಾ (ಮೇರು)

(ಹಿಂದಿನ ಪದನಾಮ – 'ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ')

# KITTURU RANI CHANNAMMA UNIVERSITY

**Vidyasangama, National Highway – 04, Bhootaramanahatti, Belagavi – 591156**

**(NAAC Accredited with B+ Grade – 2021) PM-UShA (MERU)**

*(Formerly known as 'Rani Channamma University, Belagavi')*

**E-mail:**registrar@rcub.ac.in

**ಕುಲಸಚಿವರ ಕಾರ್ಯಾಲಯ**

**Office of the Registrar**

**Website:** www.rcub.ac.in

**Phone No.: 0831-2565234**


ಸಂ: ಕಿರಾಚವಿ/ಬೆಳಗಾವಿ/ಕುಸಕಾ/ಜಿಎಡಿ/2026-27/158257/ 4275 ದಿನಾಂಕ: 24 SEP 2026

## ಸುತ್ತೋಲೆ

**ವಿಷಯ:** ಸರ್ಕಾರಿ ನೌಕರರ ಕೆಂಪು-ಹಳದಿ ಬಣ್ಣದ ಗುರುತಿನ ಚೀಟಿಯ ಕೊರಳುದಾರದ (ಟ್ಯಾಗ್) ದುರ್ಬಳಕೆ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:17-09-2026.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ/04/2024, ದಿನಾಂಕ:16-08-2024 ರನ್ವಯ **"ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ"** ಅಭಿಯಾನದಡಿ ಎಲ್ಲಾ ರಾಜ್ಯ ಸರ್ಕಾರಿ ನೌಕರರು ಕೆಂಪು-ಹಳದಿ ಬಣ್ಣ ಒಳಗೊಂಡಿರುವ ಗುರುತಿನ ಚೀಟಿಯ ಕೊರಳುಧಾರವನ್ನು ಕಡ್ಡಾಯವಾಗಿ ಧರಿಸುವಂತೆ ನಿರ್ದೇಶನ ನೀಡಲಾಗಿತ್ತು, ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ:ಸಿಆಸುಇ/04/ರಾಸ/2024, ದಿನಾಂಕ:27-08-2026 ರನ್ವಯ **"ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ"** ಅಭಿಯಾನದಡಿ ಎಲ್ಲಾ ರಾಜ್ಯ ಸರ್ಕಾರಿ ನೌಕರರು ಕೆಂಪು-ಹಳದಿ ಬಣ್ಣಗಳನ್ನು ಒಳಗೊಂಡಿರುವ ಕೊರಳುದಾರ (ಟ್ಯಾಗ್) ಹೊಂದಿರುವ ಗುರುತಿನ ಚೀಟಿಯ ಕೊರಳುಧಾರವನ್ನು ಧರಿಸಲಾಗುತ್ತಿದೆ. ಆದರೆ, ಕೆಲವು ಕಡೆಗಳಲ್ಲಿ ವ್ಯವಹಾರಿಕವಾಗಿ ಮಾರಾಟ ಮಾಡಲಾಗುತ್ತಿದ್ದು ಜನ ಸಾಮಾನ್ಯರೂ ಕೂಡ ಈ ಕೊರಳುಧಾರವನ್ನು ಖರೀದಿ ಮಾಡಿ ಕಛೇರಿಗಳಿಗೆ ಅನಧಿಕೃತವಾಗಿ ಪ್ರವೇಶಿಸುತ್ತಿದ್ದಾರೆಂಬುದು ಗಮನಾರ್ಹವಾಗಿರುತ್ತದೆ. ಆದ್ದರಿಂದ ಈ ಹಿನ್ನೇಲೆಯಲ್ಲಿ ಎಲ್ಲಾ ಕಛೇರಿಗಳಲ್ಲಿ ಗುರುತಿನ ಚೀಟಿ ತಪಾಸಣೆ ಮಾಡುವವರು ತಮ್ಮ ಕಛೇರಿಗೆ ಆಗಮಿಸುವವರು ಕೇವಲ ಕೊರಳುಧಾರವನ್ನು ಧರಿಸುವುದನ್ನು ಗಮನಿಸದೇ, ಗುರುತಿನ ಚೀಟಿಯನ್ನು ಸಹ ಕಡ್ಡಾಯವಾಗಿ ಪರೀಕ್ಷಿಸಿ ಒಳಗೆ ಪ್ರವೇಶಕ್ಕೆ ಅವಕಾಶ ನೀಡಬೇಕೆಂದು ಈ ಮೂಲಕ ತಿಳಿಸಲಾಗಿದೆ.

**ಸದರಿ ಟಿಪ್ಪಣಿಯು ಮಾನ್ಯ ಕುಲಸಚಿವರಿಂದ ಅನುಮೋದಿಸಲ್ಪಟ್ಟಿದೆ.**

Digitally signed by
DARIKHAN K KAMBLE
Date: 24-09-2026
14:50:06

**ಕುಲಸಚಿವರ ಪರವಾಗಿ**

**ಇವರಿಗೆ,**

1. ಮುಖ್ಯಸ್ಥರುಗಳು, ಎಲ್ಲಾ ಆಡಳಿತ ವಿಭಾಗಗಳು, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
2. ಮುಖ್ಯಸ್ಥರುಗಳು/ಸಂಯೋಜಕರುಗಳು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
3. ಸಂಯೋಜಕರು, ಸ್ನಾತಕೋತ್ತರ ಕೇಂದ್ರ, ವಿಜಯಪುರ.
4. ಪ್ರಾಚಾರ್ಯರು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ
5. ವಿಶ್ವವಿದ್ಯಾಲಯದ ಎಲ್ಲಾ ಬೋಧಕ, ಬೋಧಕೇತರ ಸಿಬ್ಬಂದಿಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ.
6. ರಕ್ಷಾ ಪ್ರತಿ.

**ಪ್ರತಿ ಮಾಹಿತಿಗಾಗಿ:**

- 1. ಪ್ರಾಚಾರ್ಯರು, ಸಂಯೋಜಿತ ಮಹಾವಿದ್ಯಾಲಯಗಳು, ಬೆಳಗಾವಿ, ಮತ್ತು ವಿಜಯಪುರ ಜಿಲ್ಲೆ

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 04 ರಾಸ 2024

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಡಾ. ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:27.08.2026.

**ಸುತ್ತೋಲೆ**

**ವಿಷಯ: ಸರ್ಕಾರಿ ನೌಕರರ ಗುರುತಿನ ಚೀಟಿಯ ಕೊರಳುದಾರದ ದುರ್ಬಳಕೆ ಕುರಿತು.**

* * * * *

"ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ" ಅಭಿಯಾನದಡಿ ಎಲ್ಲಾ ಸರ್ಕಾರಿ ನೌಕರರು ಕೆಂಪು-ಹಳದಿ ಬಣ್ಣದ ಗುರುತಿನ ಚೀಟಿಯ ಕೊರಳುದಾರವನ್ನು ಧರಿಸುವಂತೆ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 04 ರಾಸ 2024, ದಿನಾಂಕ:16.08.2024 ಯನ್ನು ಹೊರಡಿಸಲಾಗಿತ್ತು. ಕೆಂಪು-ಹಳದಿ ಕೊರಳುದಾರವನ್ನು ಕೆಲವು ಕಡೆಗಳಲ್ಲಿ ವ್ಯಾವಹಾರಿಕವಾಗಿ ಮಾರಾಟ ಮಾಡಲಾಗುತ್ತಿದ್ದು, ಜನ ಸಾಮಾನ್ಯರೂ ಕೂಡ ಈ ಕೊರಳುದಾರಗಳನ್ನು ಖರೀದಿ ಮಾಡಿ ಕಛೇರಿಗಳಿಗೆ ಅನಧಿಕೃತವಾಗಿ ಪ್ರವೇಶಿಸುತ್ತಿದ್ದಾರೆ ಎಂದು ಕಳವಳಗಳು ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ, ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಗುರುತಿನ ಚೀಟಿ ತಪಾಸಣೆ ಮಾಡುವವರು ತಮ್ಮ ಕಛೇರಿಗೆ ಆಗಮಿಸುವವರು ಕೇವಲ ಕೊರಳುದಾರವನ್ನು ಧರಿಸಿರುವುದನ್ನು ಮಾತ್ರ ಗಮನಿಸದೆ, ಗುರುತಿನ ಚೀಟಿಯನ್ನು ಸಹ ಕಡ್ಡಾಯವಾಗಿ ಪರೀಕ್ಷಿಸಿ ಒಳಗೆ ಪ್ರವೇಶ ನೀಡುವಂತೆ ಸಂಬಂಧಿಸಿದವರಿಗೆ ನಿರ್ದೇಶನಗಳನ್ನು ನೀಡುವಂತೆ ಈ ಮೂಲಕ ತಿಳಿಸಿದೆ.

ಸಂದೀಪ್ ಬಿ.ಕೆ.
(ಸಂದೀಪ್ ಬಿ.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ರಾಜಕೀಯ)

**ಇವರಿಗೆ:**

1. ಸರ್ಕಾರದ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
2. ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಪರಿಷತ್ತು ಮತ್ತು ವಿಧಾನ ಸಭೆ, ವಿಧಾನ ಸೌಧ, ಬೆಂಗಳೂರು.
3. ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗಸೌಧ, ಬೆಂಗಳೂರು.
4. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಪೊಲೀಸ್ ಪ್ರಧಾನ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.
6. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
7. ಎಲ್ಲಾ ಪ್ರಾದೇಶಿಕ ಆಯುಕ್ತರು / ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
8. ಎಲ್ಲಾ ಪೊಲೀಸ್ ಆಯುಕ್ತರುಗಳು, ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು.
9. ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಪತಿಗಳು.
10. ರಾಜ್ಯಪಾಲರ ವಿಶೇಷ ಕಾರ್ಯದರ್ಶಿ, ರಾಜಭವನ, ಬೆಂಗಳೂರು.
11. ಪೊಲೀಸ್ ಇನ್‌ಸ್ಪೆಕ್ಟರ್, ವಿಧಾನ ಸೌಧ, ಭದ್ರತಾ ವಿಭಾಗ, ವಿಧಾನ ಸೌಧ, ಬೆಂಗಳೂರು.
12. ಎಲ್ಲಾ ನಿಗಮ / ಮಂಡಳಿ / ಪ್ರಾಧಿಕಾರಗಳ ಅಧ್ಯಕ್ಷರು.
13. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.


ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ
ಕುಲಸಚಿವರ ಕಾರ್ಯಾಲಯ
ಟಪಾಲ/ಇ-ಆಫೀಸ್ ಸ್ವೀಕೃತಿ ಸಂಖ್ಯೆ: 3660
ದಿನಾಂಕ: 29/8/26
ವಿಭಾಗ/ಸಂಕಲನ:
DPAR
ಕುಲಸಚಿವರು